ಕಾಲೇಜಿನಲ್ಲಿದ್ದಾಗ ನಾನಾಗಲೀ ಅನಿರುದ್ಧನಾಗಲೀ ನಿನ್ನನ್ನು ಸರಿಯಾಗಿ ಮಾತನಾಡಿಸಿದ್ದೇ ಇಲ್ಲ. ಯು ವರ್ ಟೂ ಟ್ರಡಿಷನಲ್ ಫರ್ ದಟ್. ಈಗ ಇದ್ದಕ್ಕಿದ್ದ ಹಾಗೆ ನಿನ್ನ ಹೊಸದೇ ವ್ಯಕ್ತಿತ್ವವನ್ನು ನೋಡುತ್ತಿದ್ದೇವೆ. ಯು ಹ್ಯಾವ್ ಇವಾಲ್ವ್ಡ್... ನೀನು ಬೇರಯೇ ವ್ಯಕ್ತಿ ಅಂತ ಅನ್ನಿಸುತ್ತೆ. ಥ್ಯಾಂಕ್ಸ್ ಫರ್ ದ ಫ್ರೆಂಡ್‌ಶಿಪ್. ಬಹುಶಃ ಎಲ್ಲರೂ ಸೆಟಲ್ ಆದ ನಂತರ ನಮ್ಮ ಸಂಬಂಧಗಳಲ್ಲಿ ಕ್ಲಾರಿಟಿ ಬಂದಿರಬಹುದು..."

ಸುಜಾತಾಳೂ ಇದಕ್ಕೆ ಉತ್ತರವನ್ನು ಬರೆದಿದ್ದಳು. ಇನ್ನೊಂದೆರಡು ತಿಂಗಳಲ್ಲಿ ಅವರು ತಮ್ಮ ಅಂತರರಾಷ್ಟ್ರೀಯ ವ್ಯಾಪಾರದ ಬಗ್ಗೆ ಒಂದು ದಿನ ಆಂತರಿಕವಾಗಿ ಚರ್ಚಿಸುವುದಾಗಿಯೂ, ಹಾಗೂ ಈ ಚರ್ಚೆಯ ಭಾಗವಾಗಿ ಪೂರ್ವ ಆಫ್ರಿಕಾದ ಮಾತುಕತೆಯೂ ಇದೆಯೆಂದು – ಖಂಡಿತವಾಗಿಯೂ ನೈರೋಬಿಗೆ ಬರುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿಯೂ ಹೇಳಿದ್ದಳು. "ಅಷ್ಟೇ ಅಲ್ಲ. ಅಕಸ್ಮಾತ್ ವ್ಯಾಪಾರದ ಸಲುವಾಗಿ ಬರದಿದ್ದರೇನು... ಸುಮ್ಮನೆ ನಿನ್ನನ್ನು, ನಿನ್ನ ಹೆಂಡತಿ ಮಕ್ಕಳನ್ನು ಕಾಣಲೆಂದೇ ನೈರೋಬಿಗೆ ಬರುತ್ತೇನೆ. ಅದಕ್ಕೇನಂತೆ" ಎಂದೂ ಬರೆದಿದ್ದಳು.

ಆ ನಂತರ ಆ ವಿಷಯದ ಬಗ್ಗೆ ಯಾವ ಚರ್ಚೆಯೂ ಆಗಲಿಲ್ಲ. ಅಖ್ತರ ತನ್ನ ಲೋಕದಲ್ಲಿ ಮುಳುಗಿಹೋದ. ಸುಜಾಳ ಅವಳದ್ದರಲ್ಲಿ.

## ಭಾಗ 2: ನಾಲ್ಕು ತಿಂಗಳ ನಂತರ

ತನ್ನ ಇನ್–ಬಾಕ್ಸಿನಲ್ಲಿ ಬಂದಿಳಿದ ಈ ಮಿಂಚಂಚೆಯಲ್ಲಿ ಅಡಗಿದ್ದ ಅರ್ಥವೇನೆಂಬುದು ಅಖ್ತರನಿಗೆ ಹೊಳೆಯಲಿಲ್ಲ.

"ನಮ್ಮ ಗ್ರಾಹಕರಾಗಿ, ಪಾಲುದಾರರಾಗಿ ಇಷ್ಟು ವರ್ಷ ನಮ್ಮ ಜೊತೆಗಿದ್ದೀರಿ. ಇನ್ನು ಮುಂದೂ ನಮ್ಮ ಈ ಪಾಲುದಾರಿಕೆ ಮುಂದುವರೆಯುತ್ತದೆಂದು ನಾವು ನಂಬಿದ್ದೇವೆ. ಅನ್–ಆಕ್ಸೆಸರೀಸ್ ಕಂಪನಿಯ ಹೊಸ ಮತ್ತು ಯುವ ತಂಡವನ್ನು ಪರಿಚಯಿಸಲು ಈ ಪತ್ರ. ಹಳೆಯ ಪರಂಪರೆಯನ್ನು ಮುಂದುವರೆಸುತ್ತಾ ಹೊಸ ಪ್ರಯೋಗಗಳ ಈ ನಮ್ಮ ಯಾತ್ರೆಯಲ್ಲಿ ನೀವೂ ನಮ್ಮಷ್ಟೇ ಉತ್ಸಾಹದಿಂದ ಪಾಲ್ಗೊಳ್ಳುತ್ತೀರೆಂದು ನಾವು ನಂಬಿದ್ದೇವೆ.

ಸದಾ ನಿಮ್ಮ ಸೇವೆಯಲ್ಲಿ

ಚಿನ್ಮಯ್ ಮತ್ತು ಶಿವಾನಿ"

ಹಾಗೆ ನೋಡಿದರೆ ಅಖ್ತರ್ ಹುಸೇನನಿಗೆ ಅನ್–ಆಕ್ಸೆಸರೀಸ್ ಸಂಸ್ಥೆಯ ಜೊತೆಗೆ ಯಾವುದೇ ವ್ಯಾಪಾರಿ ಸಂಬಂಧ ಇರಲಿಲ್ಲ. ತನ್ನ ಕಾಲೇಜಿನ ಸಹಪಾಠಿ ಸುಜಾತಾ ಮತ್ತು ಅವಳ ಗಂಡ ಮುಕುಂದಸಾಗರನಿಗೆ ಸೇರಿದ್ದ ವ್ಯಾಪಾರವು ತನ್ನ ದೇಶವಾದ ಕೀನ್ಯಾದಲ್ಲಿ ಬೆಳೆಯುವ ಸಲುವಾಗಿ ಹಲವು ವ್ಯಾಪಾರಸ್ಥರ ಪರಿಚಯವನ್ನು ಅವನು ಮಾಡಿಕೊಟ್ಟಿದ್ದುಂಟು. ಅಖ್ತರ ನೈರೋಬಿಯಲ್ಲಿ ತನ್ನ ಲಘು ಎಂಜಿನಿಯರಿಂಗ್ ಸಂಸ್ಥೆಯನ್ನು ನಡೆಸುತ್ತಿದ್ದ. ಅನ್–ಅಕ್ಸಸರೀಸಿನ ಡೇಟಾಬೇಸಿನಲ್ಲಿ ಅಖ್ತರನ ಹೆಸರಿದ್ದದ್ದರಿಂದ ಅವನಿಗೆ ಈ ಪತ್ರವು ಬಂದಿರಲಿಕ್ಕೆ ಸಾಕು. ಆದರೆ ಪತ್ರ ಬಂದದ್ದು ಯಾಕೆ ಮತ್ತು ಹೇಗೆ ಎನ್ನುವುದು ಮುಖ್ಯ ವಿಚಾರವಾಗಿರಲಿಲ್ಲ. ಬದಲಿಗೆ ಇದರ ಹಿನ್ನೆಲೆಯು ಅವನಲ್ಲಿ ಕುತೂಹಲವನ್ನು ಉಂಟುಮಾಡಿತ್ತು. ನಾಲ್ಕು ತಿಂಗಳ ಹಿಂದಷ್ಟೇ ಅಖ್ತರ ತನ್ನ ವ್ಯಾಪಾರದ ನಿಮಿತ್ತ ಭಾರತಯಾತ್ರೆ ಕೈಗೊಂಡಿದ್ದ. ಆಗ ಮುಂಬಯಿಯಲ್ಲಿ ಅನ್–ಅಕ್ಸಸರೀಸ್ ಮಾಲೀಕ–ನಿರ್ವಾಹಕರಾದ ಸುಜಾತಾ–ಮುಕುಂದಸಾಗರರ ಭೇಟಿಯೂ ಆಗಿತ್ತು. ವ್ಯಾಪಾರವನ್ನು ಬಿಟ್ಟುಕೊಡುವ, ಹೊಸಬರನ್ನು ವ್ಯಾಪಾರದಲ್ಲಿ ಸೇರಿಸಿಕೊಳ್ಳುವ ಯಾವುದೇ ಮಾತುಕತೆಯನ್ನು ಅವರು ಆಡಿರಲಿಲ್ಲ. ಏರ್‌ಪೋರ್ಟಿನಲ್ಲಿ ಅಖ್ತರನನ್ನು ಬೀಳ್ಕೊಡುವಾಗ ಸುಜಾತಾಳೇ ಕೀನ್ಯಾಕ್ಕೆ